ಹೊರಗೆ ಉಚ್ಚ ನ್ಯಾಯಾಲಯದ ಪೀಠವೊಂದನ್ನು ಸ್ಥಾಪಿಸುವುದು ಅಪೇಕ್ಷಣೀಯವಲ್ಲ" ಎಂದು ತಿಳಿಸಿದೆ. ತದನಂತರ ಸತತವಾಗಿ ಇದೇ ನಿರ್ಣಯವನ್ನು ತಿಳಿಸುತ್ತಾ ಬಂದಿರುತ್ತದೆ.

ಹುಬ್ಬಳ್ಳಿ -ಧಾರವಾಡದಲ್ಲಿ ಉಚ್ಚ ನ್ಯಾಯಾಲಯದ ಪೂರ್ಣ ಪೀಠವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಸಚಿವ ಸಂಪುಟ ಹಾಗೂ ಉಭಯ ಸದನಗಳು ಅಂಗೀಕರಿಸಿದೆ. ಆದರೆ ಈ ದಿಸೆಯಲ್ಲಿ ಉಚ್ಚ ನ್ಯಾಯಾಲಯದ ಸಹಮತಿ ದೊರಕದೇ ಇರುವುದರಿಂದ ನ್ಯಾಯಾಲಯದ ಸ್ಥಾಪನೆಗೆ ಅಡಚಣೆ ಉಂಟಾಗಿದೆ.

ನೂತನ ಮುಖ್ಯ ನ್ಯಾಯಾಧೀಶರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿರುವುದರಿಂದ, ಉಚ್ಚ ನ್ಯಾಯಾಲಯದ ನಿಲುವನ್ನು ಮರುಪರಿಶೀಲಿಸಿ ಅನುಮತಿಯನ್ನು ನೀಡಲು ಅವರನ್ನು ಕೋರಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಕಳ್ಳತನ, ದರೋಡೆ, ಕೊಲೆಗಳು ಜಾಸ್ತಿಯಾಗಿರುವುದು.

198 - ಶ್ರೀ ಜಗದೀಶ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾ ನಗರದಲ್ಲಿ ಇತ್ತೀಚಿನ ಕೆಲವು ದಿವಸಗಳಲ್ಲಿ ಕಳ್ಳತನ, ದರೋಡೆ, ಕೊಲೆಗಳು, ಜಾಸ್ತಿ ಆಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ, (ಗೃಹ ಸಚಿವರು)

ಅ) ಹಿಂದಿನ ವರ್ಷಕ್ಕೆ ತುಲನೆ ಮಾಡಿದರೆ, ಪ್ರಸ್ತುತ ಸಾಲಿನಲ್ಲಿ ಅಂದರೆ 1995ನೇ ಸಾಲಿನಲ್ಲಿ ವರದಿಯಾದ ಪ್ರಕರಣಗಳು ಗಣನೀಯವಾಗಿ ಜಾಸ್ತಿಯಾಗಿರುವುದಿಲ್ಲ.

ಆ) ಎ.ಸಿ.ಪಿ. ದರ್ಜೆಯ ಅಧಿಕಾರಿಯವರ ನೇತೃತ್ವದಲ್ಲಿ ದರೋಡೆ, ಕಳ್ಳತನ ಹಾಗೂ ಇತರೆ ಪ್ರಕರಣಗಳನ್ನು ಪತ್ತೆಹಚ್ಚಿ ಹತ್ತಿಕ್ಕಲು ನಗರ ಅಪರಾಧ ಕೇಂದ್ರವನ್ನು ಪ್ರಾರಂಭಿಸಲಾಗಿದೆ ಮತ್ತು ರಾತ್ರಿ ವೇಳೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳಿಗೆ ಪೋಲಿಸ್ ಬೆಂಗಾವಲನ್ನು ಒದಗಿಸಲಾಗುತ್ತಿದೆ.

ದೇಶಪಾಂಡೆ ನಗರದಲ್ಲಿ ಪೋಲಿಸರ ಗೋಲಿಬಾರ್‌ನಲ್ಲಿ ಮೃತಪಟ್ಟವರಿಗೆ ಪರಿಹಾರ

179 - ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ನಗರದ ದೇಶಪಾಂಡೆ ನಗರದಲ್ಲಿ 1994ರ ಆಗಸ್ಟ್ 15ರಂದು ಸಂಭವಿಸಿದ ಪೋಲಿಸರ ಗೋಲಿಬಾರ್‌ನಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬದ ಸದಸ್ಯರಿಗೆ ಸರ್ಕಾರಿ ನೌಕರಿ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಜನರಿಗೆ ನೀಡಲಾಗಿದೆ? ಇನ್ನೂ ಎಷ್ಟು ಜನರಿಗೆ ನೀಡಬೇಕಾಗುವುದು, ಏಕೆ ನೀಡಲಾಗಿಲ್ಲ?

ಇ) ಗೋಲಿಬಾರ್‌ನಲ್ಲಿ ಗಾಯಗೊಂಡವರಿಗೆ ಏನಾದರೂ ಪರಿಹಾರ ನೀಡಲಾಗಿದೆಯೇ? ನೀಡಿದ್ದಲ್ಲಿ ಮೊತ್ತವೆಷ್ಟು? ನೀಡದಿದ್ದಲ್ಲಿ ಕಾರಣಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ, (ಗೃಹ ಸಚಿವರು)

ಅ) ಇಲ್ಲ.

ಆ) ಹಾಲಿ ನಿಯಮಾವಳಿಗಳ ಪ್ರಕಾರ ಇಂಥಹ ಪ್ರಕರಣಗಳಲ್ಲಿ ಮೃತಪಟ್ಟ ಕುಟುಂಬದ ಸದಸ್ಯರಿಗೆ ಸರ್ಕಾರಿ ನೌಕರಿ ನೀಡಲು ಅವಕಾಶವಿಲ್ಲ.